ಮೀಸಲಾತಿ ನೀತಿಯ ಉಲ್ಲಂಘನೆ

211 (1181) :

ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :

ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಸರ್ಕಾರದಿಂದ ಮಾನ್ಯತೆ ಪಡೆದ ಕಾಲೇಜುಗಳನ್ನು ನಡೆಸುತ್ತಿರುವ ಅನುದಾನಿತ ಮತ್ತು ಅನುದಾನರಹಿತ ವಿದ್ಯಾಸಂಸ್ಥೆಗಳು ಮೀಸಲಾತಿ ನಿಯಮ ಅನುಸರಿಸದೆ ಆ ವರ್ಗದ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಹಾಗಿದ್ದಲ್ಲಿ ಈ ಕಾಲೇಜುಗಳಲ್ಲಿ ಮೀಸಲಾತಿಯಂತೆ ವಿದ್ಯಾರ್ಥಿಗಳಿಗೆ ಪ್ರವೇಶ ಒದಗಿಸಿಕೊಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಬಿ.ಎ.ಮೊಹಿದ್ದೀನ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು

ಆ) ಇಲಾಖೆಯು 21-5-96 ರಲ್ಲೇ ಎಲ್ಲಾ ಸಂಬಂಧಿಸಿದ ಅಧಿಕಾರಿಗಳಿಗೆ ಸುತ್ತೋಲೆಯನ್ನು ಕಳಿಸಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಸಮಯದಲ್ಲಿ ಮೀಸಲಾತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸುತ್ತೋಲೆಯಲ್ಲಿ ತಿಳಿಸಿದೆ.

ಬೆಂಗಳೂರು ವಿಶ್ವವಿದ್ಯಾಲಯವು "ಮೀಸಲಾತಿ ಜಾರಿ ಸಮಿತಿ" ನೇಮಕ ಮಾಡಿದ್ದು, ಅವರು ತಮ್ಮ ಅಧೀನದಲ್ಲಿ ಬರುವ ಕಾಲೇಜುಗಳನ್ನು ತಪಾಸಣೆ ಮಾಡಿ 20 ಕಾಲೇಜುಗಳ ಬಗ್ಗೆ ವರದಿಯ ಪ್ರತಿಯನ್ನು ಕಾಲೇಜು ಶಿಕ್ಷಣ ಆಯುಕ್ತರಿಗೆ ರವಾನಿಸಿರುತ್ತಾರೆ. ಕಾಲೇಜು ಶಿಕ್ಷಣ ಆಯುಕ್ತರು ತಪ್ಪಿತಸ್ಥ ಕಾಲೇಜುಗಳಿಗೆ ನೀಡುತ್ತಿರುವ ಅನುದಾನವನ್ನು ಏಕೆ ತಡೆಹಿಡಿಯಬಾರದು ಎಂದು ನೋಟೀಸ್ ಜಾರಿ ಮಾಡಿರುತ್ತಾರೆ. ಮೇಲ್ಕಂಡ ಸಮಿತಿಯವರು ಸದ್ರಿ ಕಾಲೇಜುಗಳು ಮೀಸಲಾತಿ ನಿಯಮ ಉಲ್ಲಂಘಿಸುವುದನ್ನು ಮುಂದುವರೆಸಿದಲ್ಲಿ ಸಂಯೋಜನೆಯನ್ನು ಮುಂದುವರೆಸಲಾಗುವುದಿಲ್ಲ ಎಂದು ಎಚ್ಚರಿಕೆಯನ್ನು ನೀಡಿರುತ್ತಾರೆ. ಇತರ ಕಾಲೇಜುಗಳ ಬಗ್ಗೆ ಮಾಹಿತಿಗಳನ್ನು ನಿರೀಕ್ಷಿಸಲಾಗಿದೆ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ಮಾನ್ಯತೆ ಪಡೆದು ಕಾಲೇಜುಗಳನ್ನು ನಡೆಸುತ್ತಿರುವ ಅನುದಾನಿತ ಮತ್ತು ಅನುದಾನರಹಿತ ವಿದ್ಯಾಸಂಸ್ಥೆಗಳು ಮೀಸಲಾತಿ ನಿಯಮವನ್ನು ಅನುಸರಿಸದೆ ಆ ವರ್ಗದ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವ ಪ್ರಶ್ನೆಗೆ ಬಂದಿದೆ ಎಂದು ಹೇಳಿದ್ದಾರೆ. ನನ್ನ ಎರಡನೇ ಪ್ರಶ್ನೆಯಲ್ಲಿ ಸರ್ಕಾರದ ಗಮನಕ್ಕೆ ಬಂದಮೇಲೆ ಅಂಥ ಕಾಲೇಜುಗಳಲ್ಲಿ ಮೀಸಲಾತಿಯಂತೆ ವಿದ್ಯಾರ್ಥಿಗಳಿಗೆ ಪ್ರವೇಶ ಒದಗಿಸಿಕೊಡಲು ಸರ್ಕಾರ ತೆಗೆದುಕೊಂಡು ಕ್ರಮಗಳೇನು ಎಂದು ಕೇಳಿರುವುದಕ್ಕೆ ಉತ್ತರದಲ್ಲಿ ಇಲಾಖೆಯು ದಿನಾಂಕ 21-5-96ರಲ್ಲೇ ಎಲ್ಲಾ ಸಂಬಂಧಿಸಿದ ಅಧಿಕಾರಿಗಳಿಗೆ ಸುತ್ತೋಲೆಯನ್ನು ಕಳುಹಿಸಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಸಮಯದಲ್ಲಿ ಮೀಸಲಾತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಆದೇಶಿಸಲಾಗಿದೆ ಎಂದು ಹೇಳಿದ್ದಾರೆ. ನಾನು ಅಧ್ಯಕ್ಷರಿಗೆ ಇವೊತ್ತು ಅಭಿನಂದನೆ ಸಲ್ಲಿಸಬೇಕಾಗಿದೆ. ಏಕೆಂದರೆ ಈ ಹಿಂದೆ ನಾನು ಈ ವಿಷಯದ ಬಗ್ಗೆ ಮಾತನಾಡಿದಾಗ

ಅಧ್ಯಕ್ಷರು ಮಧ್ಯೆ ಪ್ರವೇಶಿಸಿ ಅನುದಾನ ಮತ್ತು ಅನುದಾನರಹಿತ ಕಾಲೇಜುಗಳಲ್ಲಿ ಮೀಸಲಾತಿ ನಿಯಮವನ್ನು ಅನುಸರಿಸಿ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಒದಗಿಸಬೇಕೆಂದು ಹೇಳಿದ್ದೀರಿ. ಸರ್ಕಾರವೇನೋ 21-5-96ರಲ್ಲಿ ಆದೇಶ ಹೊರಡಿಸಿದ್ದರೂ ಕೂಡ ಅದು ಇವೊತ್ತಿಗೂ ಸರಿಯಾಗಿ ಜಾರಿಯಾಗುತ್ತಿಲ್ಲ. ನಾನು ಈ ನಿಟ್ಟಿನಲ್ಲಿ ಪ್ರಶ್ನಿಸುವುದೇನೆಂದರೆ ಸರ್ಕಾರ ಹೊರಡಿಸಿದ ಆದೇಶದ ನಂತರ ಎಷ್ಟು ವಿದ್ಯಾರ್ಥಿಗಳನ್ನು ಮೀಸಲಾತಿ ನಿಯಮದಂತೆ ಅನುದಾನ ಹಾಗೂ ಅನುದಾನರಹಿತ ಕಾಲೇಜುಗಳಲ್ಲಿ ದಾಖಲಾತಿ ಮಾಡಿ ಕೊಂಡಿದ್ದಾರೆ ಎಂಬ ಬಗ್ಗೆ ಮಂತ್ರಿಗಳು ಉತ್ತರ ಕೊಡಬೇಕು. ಮೀಸಲಾತಿ ನಿಯಮದ ಪ್ರಕಾರ ದಾಖಲಾತಿ ಮಾಡಿಕೊಂಡಿಲ್ಲವೆನ್ನುವ ಕಾಲೇಜುಗಳೇನಿವೆ ಅದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ? ಇದರ ಬಗ್ಗೆ ಹೇಳಬೇಕು.

ಶ್ರೀ ಬಿ.ಎ. ಮೊಯಿದ್ದೀನ್ : ಮಾನ್ಯ ಅಧ್ಯಕ್ಷರೆ, ಸರ್ಕಾರದ ಸುತ್ತೋಲೆಯ ನಂತರ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮೀಸಲಾತಿ ಜಾರಿ ಸಮಿತಿಯನ್ನು ಮಾಡಿದೆ. ಅದರಿಂದ ಈ ಬಗ್ಗೆ ಪರಿಶೀಲನೆ ನಡೆದು 20 ಕಾಲೇಜುಗಳಲ್ಲಿ ಮೀಸಲಾತಿ ನಿಯಮವನ್ನು ಪಾಲಿಸಿಲ್ಲವೆಂಬುದಾಗಿ ವರದಿ ಕೂಡ ಬಂದಿದೆ. ಇವುಗಳಿಗೆ ಈಗಾಗಲೇ ಈ ಬಗ್ಗೆ ನೋಟೀಸ್ ಕೂಡ ಜಾರಿ ಮಾಡಿ ಏಕೆ ನಿಮ್ಮ ಅಫಿಲಿಯೇಷನ್ ಅನ್ನು ನಾವು ಹಿಂದಕ್ಕೆ ಪಡೆಯಬಾರದು ಎಂಬುದಾಗಿ ವಿವರಣೆ ಕೇಳಲಾಗಿದೆ. ಇಲ್ಲಿ ನಾವು ಅನುದಾನ ಹಾಗೂ ಅನುದಾನ ರಹಿತ ಕಾಲೇಜುಗಳ ನಾವು ಅನುದಾನರಹಿತ ಕಾಲೇಜುಗಳನ್ನು ಈ ವಿಚಾರದಲ್ಲಿ ನಾವು ಎಷ್ಟರ ಮಟ್ಟಿಗೆ ಹಿಡಿತದಲ್ಲಿ ಇಟ್ಟುಕೊಳ್ಳಬಹುದು ಆ ಮೂಲಕ ಅವರನ್ನು ಎಷ್ಟರ ಮಟ್ಟಿಗೆ ನಾವು ಹದ್ದುಬಸ್ತಿನಲ್ಲಿಡಬಹುದು ಎಂಬ ಬಗ್ಗೆ ನೋಡಬೇಕಾಗುತ್ತದೆ. ಭಾವನಾತ್ಮಕವಾಗಿ ಮಾತನಾಡುವುದು ಬೇರೆ ವಿಚಾರ. ಆದರೆ ವಸ್ತುಸ್ಥಿತಿಯ ಬಗ್ಗೆ ವಿಚಾರ ಮಾಡಿದಾಗ ಏನು ಮಾಡಬಹುದು ಎಂಬ ಬಗ್ಗೆ ವಿಚಾರ ಮಾಡಬೇಕು. ಇವೊತ್ತು ಅನುದಾನಿತ ಕಾಲೇಜುಗಳೇನಿವೆ ಅಲ್ಲಿ ಮೀಸಲಾತಿ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಲು ಆದೇಶ ಜಾರಿಗೆ ತಂದಿದ್ದೇವೆ. ನಾನೂ ಕೂಡ ತಮ್ಮ ಮೂಲಕ ವಿಜ್ಞಾಪನೆ ಮಾಡಿಕೊಳ್ಳುವುದೇನೆಂದರೆ ಇಂದು ಯಾವ ಕಾಲೇಜುಗಳು ಅನುದಾನ ಪಡೆಯುತ್ತಿಲ್ಲವೋ ಅವರುಗಳೂ ಕೂಡ ಇಂದು ಒಂದು ದ್ವೀಪವಾಗಿ ವ್ಯವಹರಿಸಬಾರದು, ಯಾರು ಇಂದು ಮೀಸಲಾತಿ ನಿಯಮಕ್ಕೆ ಒಳಪಡುತ್ತಾರೋ ಅಂಥವರನ್ನೂ ಕೂಡ ಪ್ರವೇಶಕ್ಕೆ ತೆಗೆದುಕೊಂಡು ಅವರನ್ನು ಮೇಲಕ್ಕೆ ಎತ್ತತಕ್ಕಂಥ ಸಮಾಜಿಕ ಜವಾಬ್ದಾರಿ ಅನುದಾನರಹಿತ ಕಾಲೇಜುಗಳವರಿಗಿದೆ. ನಾವು ಈ ಸಾಮಾಜಿಕ ಜವಾಬ್ದಾರಿಯ ಬಗ್ಗೆ ಕೇವಲ ಕಾನೂನುಗಳನ್ನು ಮಾಡಿಯೇ ಮಾಡುವುದಕ್ಕಾಗುವುದಿಲ್ಲ. ಈಗ ಏನು ಸುತ್ತೋಲೆ ತರಲಾಗಿದೆ ಅದರ ಬಗ್ಗೆ ಮೊದಲೇ ಸೂಚನೆಯನ್ನು ಮಾನ್ಯ ಅಧ್ಯಕ್ಷರು ಕೊಟ್ಟಿರಬಹುದು, ಈ ಸುತ್ತೋಲೆ ಬಗ್ಗೆ ಚೆನ್ನಾಗಿ ಅರಿತುಕೊಂಡು, ಆ ಪ್ರಕಾರ ಅನುದಾನ ರಹಿತ ಕಾಲೇಜುಗಳವರು ನಡೆದುಕೊಳ್ಳಬೇಕೆಂದು ಅಧ್ಯಕ್ಷರ ಮೂಲಕ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ನಿಯಮವನ್ನು ಅನುಸರಿಸದಿರುವ ಕಾಲೇಜುಗಳಿಗೆ ಅವರ ಅಫಿಲಿಯೇಷನ್ ಅನ್ನು ಹಿಂದಕ್ಕೆ ಪಡೆಯುವ ಬಗ್ಗೆ ನೋಟೀಸ್ ಕೊಟ್ಟಿದ್ದೇವೆ. ಆದರೆ ಇಲ್ಲಿಯವರೆಗೂ ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಈ ಕಾಲೇಜುಗಳ ಬಗ್ಗೆ ಮುಂದೆ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ಚಿಂತನೆಯನ್ನು ಮಾಡುತ್ತೇವೆ ಎಂದು ತಿಳಿಸಬಯಸುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ ಮಾನ್ಯ ಮಂತ್ರಿಗಳು ಉತ್ತರದಲ್ಲಿಯೇ ದ್ವಂದ್ವ ಇರುವುದನ್ನೂ ತಾವು ಗಮನಿಸಿರಬಹುದು. ಬೆಂಗಳೂರು ವಿಶ್ವವಿದ್ಯಾಲಯ ನೇಮಕ ಮಾಡಿರುವ ಮೀಸಲಾತಿ ಜಾರಿ ಸಮಿತಿಗೆ 20 ಕಾಲೇಜುಗಳು ಮೀಸಲಾತಿ ನಿಯಮವನ್ನು ಅನುಸರಿಸಿಲ್ಲವೆಂದು ತಿಳಿದಿದೆ ಎಂದು ಹೇಳಿದ್ದಾರೆ. ಹೀಗಿರುವಾಗ ರಾಜ್ಯದಲ್ಲಿರುವ ಮೈಸೂರು ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ ಹಾಗೂ ಇತರ ವಿಶ್ವವಿದ್ಯಾಲಯಗಳಲ್ಲಿ ಮೀಸಲಾತಿ ನಿಯಮವನ್ನು ಅನುಸರಿಸುವ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ. ಆ ವಿಶ್ವವಿದ್ಯಾಲಯಗಳ ಬಗ್ಗೆ ಮಂತ್ರಿಗಳು ಹೇಳೇ ಇಲ್ಲ. 1996 ರಲ್ಲಿ ಹೊರಡಿಸಿದ ಆದೇಶ ಕೇವಲ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಾತ್ರ ಸೀಮಿತವಾಗಿಲ್ಲ. 1996ರ ಹಿಂದೆ ಈ ಸುತ್ತೋಲೆ ಇರಲಿಲ್ಲವಾದ್ದರಿಂದ ಮೀಸಲಾತಿ ನಿಯಮವನ್ನು ಅನುಸರಿಸುತ್ತಿರಲಿಲ್ಲ.

ಈ ಮೀಸಲಾತಿ ನಿಯಮದ ಸುತ್ತೋಲೆ ಬಂದಿರುವುದಕ್ಕೆ ಮಾನ್ಯ ಸಭಾಧ್ಯಕ್ಷರೇ ಕಾರಣಕರ್ತರು ಎಂದು ಹೇಳಿದರೆ ತಪ್ಪಾಗಲಾರದು. ಬೇರೆ ವಿಶ್ವವಿದ್ಯಾಲಯಗಳ ವ್ಯಾಪ್ತಿಗೆ ಬರುವ ಕಾಲೇಜುಗಳಲ್ಲಿ ಮೀಸಲಾತಿ ನಿಯಮವನ್ನು ಅನುಸರಿಸದಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ? ಇನ್ನು ಎರಡನೆಯದಾಗಿ ತಾವು ಅನುದಾನ ಹಾಗೂ ಅನುದಾನ ರಹಿತ ಎಂಬುದಾಗಿ ಹೇಳಿದ್ದೀರಿ.

ಅನುದಾನವನ್ನು ಕೊಡುವುದರಲ್ಲಿ ತಾವು ಸರ್ಕಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕೆಂದು ಅವರ ಮೇಲೆ ಒತ್ತಡವನ್ನು ತಂದು ತಮ್ಮ ಇನ್ಸ್‌ಪೆಕ್ಟರ್‌ಗಳನ್ನು ಅಲ್ಲಿಗೆ ಕಳುಹಿಸಿ ಕೊಟ್ಟರೆ ಆ ನಿಯಮವನ್ನು ಪಾಲನೆ ಮಾಡಬೇಕಾಗುತ್ತದೆ. ಆ ಅನುದಾನರಹಿತ ಕಾಲೇಜುಗಳಿಗೆ ತಾವು ಮಾನ್ಯತೆಯನ್ನು ಕೊಟ್ಟಿರುವುದರಿಂದಲೇ ಅವುಗಳು ಈ ರಾಜ್ಯದಲ್ಲಿ ನಡೆಯುವುದಕ್ಕೆ ಸಾಧ್ಯ. ಅವರು ಮಾನ್ಯತೆಯನ್ನು ಪಡೆದುಕೊಳ್ಳುವಾಗ ತಮ್ಮ ಷರತ್ತುಗಳಿಗೆ ಒಳಪಟ್ಟಿಲ್ಲವೇನು? ಇವತ್ತು ಅಲ್ಲಿ ಸರ್ಕಾರಿ ನಿಯಮಗಳನ್ನು ಅಳವಡಿಸಲಿಲ್ಲವೆಂದರೆ ಷರತ್ತುಗಳ ಉಲ್ಲಂಘನೆ ಆಗುತ್ತಿಲ್ಲವೇ? ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ದಯವಿಟ್ಟು ಇವತ್ತು ಬೆಂಗಳೂರು ವಿಶ್ವವಿದ್ಯಾಲ ಯದ ವ್ಯಾಪ್ತಿಯಲ್ಲಿ ಬರುವ ಆ 20 ಕಾಲೇಜುಗಳು ಯಾವ್ಯಾವು ಎಂದು ಪಟ್ಟಿ ಮಾಡುತ್ತೀರೇನು ? ಆ ಪಟ್ಟಿಯನ್ನು. ನಮಗೆ ಒದಗಿಸಿಕೊಡುತ್ತಿರೇನು? ಮತ್ತು ಇತರ ವಿಶ್ವವಿದ್ಯಾಲಯಗಳಲ್ಲಿ ಯಾವುದು ಯಾವುದನ್ನು ಅಳವಡಿಸುತ್ತಿಲ್ಲ, ಅದರ ಪಟ್ಟಿಯನ್ನು ಸಹ ಒದಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆ 20 ಕಾಲೇಜುಗಳು ಯಾವುವು ? ಆ 20 ಕಾಲೇಜುಗಳ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಇದನ್ನು ನಾನು ಸ್ಪಷ್ಟವಾಗಿ ಸರ್ಕಾರದವರಲ್ಲಿ ಕೇಳಲು ಇಚ್ಛೆಪಡುತ್ತೇನೆ.

ಶ್ರೀ ಬಿ.ಎ. ಮೊಯಿದ್ದೀನ್ : 20 ಕಾಲೇಜುಗಳಲ್ಲಿ ಅನುದಾನ ರಹಿತ ಕಾಲೇಜುಗಳು ಇವೆ. ಆ ಪಟ್ಟಿ ನನ್ನಲ್ಲಿ ಇಲ್ಲ. ಅದು ಬೇಕಾದರೆ ಒದಗಿಸಿಕೊಡುತ್ತೇನೆ. ಅವರ ಮೇಲೆ ಏತಕ್ಕೆ ಕಠಿಣ ಕ್ರಮವನ್ನು ಕೈಗೊಂಡಿಲ್ಲವೆಂದು ತಾವು ಹೇಳಿದ್ದೀರಿ. ನಾವು ಕಠಿಣ ಕ್ರಮವನ್ನು ಕೈಗೊಳ್ಳಲು ತಯಾರಿದ್ದೇವೆ. ನಮಗೆ ದೂರುಗಳು ಬರಬೇಕಲ್ಲವೇ? ತಾವಾಗಿ ದೂರು ಕೊಡಬೇಕು ಅಥವಾ ಆ ವಿದ್ಯಾರ್ಥಿಗಳಾದರೂ ದೂರನ್ನು ಕೊಡಬೇಕು. ಇದುವರೆವಿಗೆ ಒಬ್ಬ ವಿದ್ಯಾರ್ಥಿಯೂ ಕೂಡ ಇಂತಹ ಕಾಲೇಜಿನಲ್ಲಿ ನನಗೆ ಪ್ರವೇಶ ಸಿಕ್ಕಿಲ್ಲವೆಂದು ದೂರು ಕೊಟ್ಟಿಲ್ಲ. ಬರಹ ರೂಪದಲ್ಲಿ ಏನಾದರೂ ದೂರನ್ನು ಕೊಟ್ಟರೆ

Even we can proceed against them criminally also. You know the acts that are prevailing in the State and the country. But nobody has filed complaints. Neither the students nor the concerned responsible persons have complained to us.

ಆದ್ದರಿಂದ ಇಂತಹ ಒಂದು ದೂರು ಬರದೇ ಇರುವುದರಿಂದ ನಾವು ಇದುವರೆವಿಗೂ ಏನೂ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಆದರೂ ಕೂಡ ನಾವು ಇದನ್ನು ಹದ್ದುಕಣ್ಣನ್ನು ಇಟ್ಟು ನೋಡುತ್ತೇವೆ. ತಾವು ಹೇಳಿದ ಹಾಗೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಮೀಸಲಾತಿ ಜಾರಿ ಸಮಿತಿ ಒಂದು ಪಕ್ಷ ಇಲ್ಲದೆ ಇದ್ದ ಪಕ್ಷದಲ್ಲಿ ಸರ್ಕಾರದಿಂದ ಸೂಚನೆಯನ್ನು ಕೊಟ್ಟು ಇದನ್ನು ಮಾಡಬೇಕೆಂದು ವಿಶ್ವವಿದ್ಯಾಲಯಗಳಿಗೆ ಆದೇಶವನ್ನು ಕೊಡುತ್ತೇವೆಂದು ಹೇಳುತ್ತೇವೆ.

ಶ್ರೀ ಹೆಚ್.ಡಿ. ಬಸವರಾಜ್ : ತಾವು ಈಗ 20 ಕಾಲೇಜುಗಳು ಎಂದು ಹೇಳಿದ್ದೀರಿ. ಇದು 96 ರಿಂದ ಮುಂದುವರಿದಿದೆ. ತಾವು ಒತ್ತಡವನ್ನು ತೆಗೆದುಕೊಂಡು ಬಂದರೆ ಮುಂದಿನ ವರ್ಷದಿಂದಲಾದರೂ ಆ ಒಂದು ವರ್ಗದವರಿಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ತಾವು ದಯವಿಟ್ಟು ಕ್ರಮವನ್ನು ಕೈಗೊಳ್ಳಿ. ಅದು ಬೇರೆಯವರಿಗೆ ಮಾದರಿಯಾಗುತ್ತದೆ; ಭಯ ಬರುತ್ತದೆ. ಆ ವರ್ಗದ ಜನತೆಗೆ ಸಮಾನತೆ ಸಿಗುತ್ತದೆ. ಪ್ರವೇಶಕ್ಕೆ ಅವಕಾಶ ಸಿಗುತ್ತದೆ ಎಂದು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

MR. SPEAKER : Please consider it.

ರಾಜ್ಯದಲ್ಲಿ ಅಂತರ್ಜಲ ಮಟ್ಟದ ಸುಧಾರಣೆ

212 (1319)

ಶ್ರೀ.ಬಿ. ಶಿವರಾಮು (ಗಂಡಸಿ) : ಮಾನ್ಯ ಗ್ರಾಮೀಣಾಭಿವೃದ್ಧಿ *ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು, ಉತ್ತರಿಸುವಿರೆ*

ಅ) ಅಂತರ್ಜಲ ಮಟ್ಟ ಬಹಳ ಕಡಿಮೆ ಇದ್ದು, ಕುಡಿಯುವ ನೀರಿಗೆ ತೊಂದರೆಯಾಗಿರುವ ಗ್ರಾಮಗಳಿಗೆ ಸರ್ಕಾರ ಜಿಲ್ಲಾಪಂಚಾಯಿತಿಯಿಂದ ಅಂತರ್ಜಲ ಮಟ್ಟದ ಸುಧಾರಣೆಗೆ ತೆಗೆದುಕೊಂಡ ಕ್ರಮಗಳು ಯಾವುವು ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ) :

ಅ) ಅಂತರ್ಜಲ ಮಟ್ಟ ಕಡಿಮೆಯಾಗಿ ಕುಡಿಯುವ ನೀರಿಗೆ ತೊಂದರೆಯಿರುವ ಗ್ರಾಮಗಳಲ್ಲಿ ಅಂತರ್ಜಲ ಮಟ್ಟದ ಸುಧಾರಣೆಗಾಗಿ ಚೆಕ್ ಡ್ಯಾಂ ಗಳ ನಿರ್ಮಾಣ, ಕೆರೆಗಳ ಹೂಳು ತೆಗೆಯುವುದು ಪರ್‌ಕೋಲೇಶನ ಟ್ಯಾಂಕ್‌ಗಳ ನಿರ್ಮಾಣದಂತಹ ಕಾಮಗಾರಿಗಳನ್ನು ಉದ್ಯೋಗ ಭರವಸೆ ಯೋಜನೆ, ಬರಪೀಡಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮ, ಪಶ್ಚಿಮಘಟ್ಟಗಳ ಅಭಿವೃದ್ಧಿ ಯೋಜನೆ ಮತ್ತು ದಶಲಕ್ಷ ಬಾವಿ ಯೋಜನೆಗಳಡಿ ಕೈಗೊಳ್ಳಲಾಗುತ್ತಿದೆ.